# ವಿಜೃಂಭಣೆಯ – ನುಡಿಸಂಭ್ರಮ ಕನ್ನಡ ಹಬ್ಬ ೨೦೧೯

ಬೆಂಗಳೂರು ಜಯನಗರದಲ್ಲಿರುವ ಜೈನ್(ಡೀಮ್ಡ್–ಟು–ಬಿ ಯೂನಿವರ್ಸಿಟಿ)ಸ್ಕೂಲ್ ಆಫ್ ಕಾಮರ್ಸ್, ಕಂಪ್ಯೂಟರ್ ಸೈನ್ಸ್ ಮತ್ತು ಐಟಿಯ ಕನ್ನಡ ವೇದಿಕೆಯು ದಿನಾಂಕ ೧೩–೧೨–೨೦೧೯ ರಂದು "ನುಡಿ ಸಂಭ್ರಮ ಕನ್ನಡ ಹಬ್ಬ"ವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಕಾರ್ಯಕ್ರಮವನ್ನು ಹೆಸರಾಂತ ಬಂಡಾಯಸಾಹಿತಿ, ರಾಜಕಾರಣಿ ಡಾ. ಬಿ ಟಿ ಲಲಿತನಾಯಕ್ ಅವರು ಉದ್ಘಾಟಿಸಿ ನಾಡಿನ ಸಂಸ್ಕೃತಿ, ಬಾಷೆಯ ಮಹತ್ವದ ಬಗ್ಗೆ ಹೇಳುತ್ತಾ ಭಾಷೆ ಎಂಬುದು ಬೆಂಕಿ ಇದ್ದ ಹಾಗೆ ಆ ಬೆಂಕಿಯಿಂದ ಭವಿಷ್ಯವನ್ನು ಬೆಳಗಿಸಿಕೊಳ್ಳಬೇಕು. ಜೊತೆಗೆ ಪರಿಸರ ವಿನಾಶ, ಭ್ರಷ್ಟಾಚಾರದ ವಿರುದ್ಧ ಇಂದಿನ ಯುವಜನಾಂಗ ಸದಾ ಸಿದ್ಧವಿರಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಖ್ಯಾತ ಅಂತರಾಷ್ಟ್ರೀಯ ಕ್ರಿಕೆಟ್ ಆಟಗಾರರಾದ ಶ್ರೀಯುತ ಜಾವಗಲ್ ಶ್ರೀನಾಥ್ ಅವರು ವಿದ್ಯಾರ್ಥಿಗಳೊಂದಿಗೆ ತಮ್ಮ ಕ್ರಿಕೆಟ್ ಬದುಕಿನ ಅನುಭಗಳನ್ನು, ಘಟನೆಗಳನ್ನು ಸಂವಾದದ ಮೂಲಕ ಹಂಚಿಕೊಂಡು ಕಾರ್ಯಕ್ರಮಕ್ಕೆ ಕಳೆಯನ್ನು ತಂದರು. ಜೈನ್ ಸಮೂಹ ಸಂಸ್ಥೆಗಳ ಉಪಾಧ್ಯಕ್ಷರಾದ ರವೀಂದ್ರ ಭಂಡಾರಿಯವರು ಕನ್ನಡದ ಬೆಳವಣಿಗೆ ಮತ್ತು ಅಭ್ಯುದಯಕ್ಕಾಗಿ ಜೈನ್ ಸಂಸ್ಥೆಯು ಸದಾ ಪ್ರೋತ್ಸಾಹವನ್ನು ನೀಡುತ್ತಿದೆ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಜಂಟಿ ನಿರ್ದೇಶಕರಾದ ಡಾ. ಬಲವಂತರಾವ್ ಪಾಟೀಲ್ ರವರು ಕನ್ನಡ ಭಾಷೆಯ ಪ್ರಾಚೀನತೆ ಮತ್ತು ಅದರ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಈ ಸಂದರ್ಭದಲ್ಲಿ ಜೈನ್ ವಿಶ್ವವಿದ್ಯಾಲಯದ ಹಿರಿಯ ವಿದ್ಯಾರ್ಥಿಗಳಾದ ಖ್ಯಾತ ಹಿನ್ನಲೆ ಗಾಯಕಿ ವರ್ಷಾ ಬಿ ಸುರೇಶ್ ಮತ್ತು ಎಬಿವಿಪಿಯ ಕಾರ್ಯದರ್ಶಿಯಾದ ಹರ್ಷನಾರಾಯಣ್‌ರನ್ನು ಸನ್ಮಾನಿಸಲಾಯಿತು. ಕರ್ನಾಟಕ ನಾಡು–ನುಡಿ ಸಂಸ್ಕೃತಿಯನ್ನು ಬಿಂಬಿಸುವ ನೃತ್ಯ, ಸಂಗೀತ, ನಾಟಕವನ್ನು ವಿದ್ಯಾರ್ಥಿಗಳು ಪ್ರಚುರ ಪಡಿಸಿದರು. ಡೊಳ್ಳುಕುಣಿತ,ಕಂಸಾಳೆ ಜನಪದ ಕಲಾತಂಡಗಳ ಪ್ರದರ್ಶನವು ನೆರೆದಿದ್ದ ವಿದ್ಯಾರ್ಥಿಗಳ ಸಮೂಹ ಹುಚ್ಚೆದ್ದು ಕುಣಿಯುವಂತೆ ಮಾಡಿತು.